# ನೀವು ಕೇಳಿದಿರಿ?

ಬಿ.ಆರ್. ಉಷಾ, ಬೆಂಗಳೂರು

ಸೊಳ್ಳೆಯು ಕಿವಿಯ ಹತ್ತಿರವೇ ಗೊಂಯ್ ಎನ್ನುವುದೇಕೆ?



ಅದು ಸರ್ಜಿಕಲ್ ಸ್ಟ್ರೈಕ್ ಸಮಯದಲ್ಲಿ ಸೊಳ್ಳೆ ಹೊರಡಿಸುವ ರಣಘೋಷ.

ಎನ್. ವೈದೇಹಿ, ಮೈಸೂರು

ಪ್ರಾಣಿಗಳ ಮುಖ್ಯ ಅಂಗಗಳನ್ನು ಮನುಜರಿಗೆ ಜೋಡಿಸುವ ಅವಕಾಶವಿದ್ದಿದ್ದರೆ ಪ್ರಾಣಿಗಳ ಗತಿ ಏನಾಗುತ್ತಿತ್ತು?

ಅಂಗದಾನ ಮಾಡುವವರೆಗೆ ರಾಜಭೋಗ, ನಂತರ ರಾಜರಿಗೆ ಭೋಜನ ಆಗುತ್ತಿತ್ತು.

ವಿ.ಎಸ್. ಹಿಂದೂಪುರ, ಬಳ್ಳಾರಿ

ಪ್ರಾಣಿಗಳು ನಗುವುದನ್ನು ನೀವು ಎಂದಾದರೂ ನೋಡಿದ್ದೀರಾ?

ಹೂಂ. ಕಾರ್ಟೂನುಗಳಲ್ಲಿ, ಅಸೆಂಬ್ಲಿಗಳಲ್ಲಿ, ಪಾರ್ಲಿಮೆಂಟಿನಲ್ಲಿ...

ಬಿ. ನಾಗರಾಜು, ಬೆಂಗಳೂರು

ಗಂಡಹೆಂಡಿರ ಜಗಳ ಉಂಡು ಮಲಗುವ ತನಕ. ಅತ್ತೆಸೊಸೆಯರ ಜಗಳ?



ದೂರ ಹೋಗುವ ತನಕ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಭೋಗ ಬಿಡದೆ ಯೋಗ ಪಡೆಯಲು ಏನಾದರೂ ಉಪಾಯವಿದೆಯೆ?

ಕೆಲವು ಮಠಗಳಲ್ಲಿ ಅಂತಹ ಅವಕಾಶ ಇದೆಯಂತೆ.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ರೈತರ ಬರದ ನೋವಿನ ಛಾಯೆಯ ನಡುವೆಯೂ ಶಾಸಕರ ಅದ್ದೂರಿ ಪಾರ್ಟಿ ಬೇಕೆ?

ಮೊಲ ಮುಲುಗುತ್ತಿರುವಾಗ ತೋಳವು ಪಾರ್ಟಿ ಮಾಡುವುದು ಕಾಡು(ವ)ನಿಯಮ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ವಿದ್ಯಾಭ್ಯಾಸವು ವ್ಯಾಪಾರೀಕರಣ ಆಗುತ್ತಿರುವುದನ್ನು ಹೇಗೆ ತಪ್ಪಿಸುವುದು?

ಗುರುಕುಲಗಳಿಗೆ/ಸರ್ಕಾರಿ ಶಾಲೆಗಳಿಗೆ ಆದ್ಯತೆ ನೀಡುವುದರ ಮೂಲಕ.

ಪಿ.ಜೆ. ರಾಘವೇಂದ್ರ, ಮೈಸೂರು

ಪರಪ್ಪನ ಅಗ್ರಹಾರ ಪ್ರೇಕ್ಷಣೀಯ ಸ್ಥಳವಾಯಿತಲ್ಲಾ...?

ಪ್ರಜ್ವಲಿಸುವ ಸಂಗತಿಗಳು ಅಲ್ಲಿರುವುದೇ ಕಾರಣವಂತೆ.

ಜಗದೀಶ ಬಿ. ಹೊಸೂರು, ಮೈಸೂರು

ಪಾನಿಪುರಿ, ದಹಿಪುರಿ, ತೈರೊಡೆಗಳನ್ನು ನಾವು ನೀರುಪುರಿ, ಮೊಸರುಪುರಿ, ಮೊಸರೊಡೆ ಎಂದರೆ ಏನಾಗುತ್ತೆ?

ಸಪ್ಲೈಯರ್‌ಗೆ ಅರ್ಥವಾಗದೆ ಕಂಫ್ಯೂಸ್ ಆಗತ್ತೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಮನುಷ್ಯ ಸಾಯುವ ಸಮಯದಲ್ಲಿ ಸುಳ್ಳು ಹೇಳುವುದಿಲ್ಲವಂತೆ?

ಆ ಹೊತ್ತಿಗೆ ಸುಳ್ಳನ್ನು ಹುಟ್ಟಿಸುವ ಸಾಮರ್ಥ್ಯ ಸತ್ತಿದ್ದರೆ ಮಾತ್ರ.

ವಿಜಯ ಬಿದರಹಳ್ಳಿ, ಹಿರೇಹಡಗಲಿ

ಆತ್ಮಚರಿತ್ರೆಗೂ, ಜೀವನಚರಿತ್ರೆಗೂ ವ್ಯತ್ಯಾಸವೇನು?

ಆತ್ಮಚರಿತ್ರೆ ವಿಸಿಟಿಂಗ್ ಕಾರ್ಡ್. ಜೀವನಚರಿತ್ರೆ ಕ್ಯಾರೆಕ್ಟರ್ ಸರ್ಟಿಫಿಕೇಟ್.

ಎಂ.ಸಿ. ಧನ್ಯತಾ, ಬೆಂಗಳೂರು

ದೇವರಿಗೆ ಮಂಗಳಾರತಿ ಮಾಡುವುದಕ್ಕೂ, ಗಂಡನಿಗೆ ಮಂಗಳಾರತಿ ಮಾಡುವುದಕ್ಕೂ ವ್ಯತ್ಯಾಸ?

ಗಂಡನಿಗೆ ಮಾಡುವುದರಲ್ಲಿ ಸಂಸ್ಕೃತ ಬದಲಾಗುತ್ತದೆ; ವರ ನಿಶ್ಚಿತ.

ಸಿ.ಕೆ. ಗಣಪ್ಪನವರ, ಮುಂಡರಗಿ

ಮನುಷ್ಯನಿಗೆ ಅತೀ ಬಿಟ್ಟಿರಲಾಗದ ವಸ್ತು ಯಾವುದು?

ಉಸಿರು.

## ಬಹುಮಾನಿತ ಪ್ರಶ್ನೆ

ಅನಸೂಯಾ ಟಿ, ಕೇದಿಗೆಮನೆ

ಬೀದಿನಾಯಿಯು ಆಕಾಶ ನೋಡುತ್ತಾ ಏಕೆ ಬೊಗಳುವುದು ಗುರುವೆ?

‘ನನ್ನ ವಿರೋಧವನ್ನು ಮುಗಿಲು ಮುಟ್ಟುವಂತೆ ಪ್ರಕಟಿಸುತ್ತಿದ್ದೇನೆ’ ಎಂದು ಸೂಚಿಸಲು.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಜಾಹೀರಾತುಗಳಿಲ್ಲದೆ ಲಾಭ ಗಳಿಸಬಹುದಾದ ದೊಡ್ಡ ವ್ಯಾಪಾರ ಯಾವುದು?

ದೂರದಿಂದಲೇ ವಾಸನೆ ಬೀರುವ ಬೆಳ್ಳುಳ್ಳಿಯ ಹೋಲ್‌ಸೇಲ್ ವ್ಯಾಪಾರ.

ಸಿಹಿಮೊಗೆ ರಮೇಶ್, ಮೈಸೂರು

ರಾಜಕಾರಣಿಗಳಿಗೆ ರಾಜಕಾರಣ ಹವ್ಯಾಸವೋ, ಉದ್ಯೋಗವೋ, ಸಮಾಜಸೇವೆಯೋ?

ಎಷ್ಟೋ ಜನರಿಗೆ ಅದು ಅವರನ್ನು ಜೈಲಿನಿಂದ ಹೊರಗಿರಿಸಬಲ್ಲ ಏಕೈಕ ಮಾರ್ಗ.

ಮಲ್ಲಿಕಾರ್ಜುನ, ಸುರಧೇನುಪುರ

ಉಳ್ಳವರು ಶಿವಾಲಯವ ಮಾಡುವರು. ಸ್ಮಾರ್ಟ್ ಫೋನ್ ಉಳ್ಳವರು?



ಆ ಆಲಯದ ಮುಂದೆ ನಿಂತು ಸೆಲ್ಫೀ ತೆಗೆದುಕೊಳ್ಳುವರು.

ಪಿ. ಜಯವಂತ ಪೈ, ಕುಂದಾಪುರ

ಪತ್ರಿಕೆಗಳಲ್ಲಿ ಸತ್ತವರ ಫೋಟೊದೊಂದಿಗೆ ಭಗವದ್ಗೀತೆಯ ಶ್ಲೋಕ ಹಾಕುವುದೇಕೆ?

ಗೀತೆಯಾದ ಮೇಲೆ ಯುದ್ಧವಾಯಿತಲ್ಲ ‘ನೀನು ಹೋದೆ, ಆಸ್ತಿ ಯುದ್ಧ ಶುರು’ ಎಂದು ಸೂಚಿಸಲು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಚಿಕ್ಕವರಿದ್ದಾಗ ನಾವು ಬುಗುರಿ ಆಡಿಸುತ್ತಿದ್ದೆವು. ದೊಡ್ಡವರಾದ ಮೇಲೆ?

ಕಾಲವೇ ಚಾವಟಿಯಾಗಿ ನಮ್ಮನ್ನು ಬುಗುರಿ ಮಾಡಿ ಆಡುತ್ತದೆ.

■ ರಾಮ್